**ಕರ್ನಾಟಕ ವಿಧಾನ ಪರಿಷತ್ತು**

**150ನೇ ಅಧಿವೇಶನ**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 87 (133 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್ ಎಸ್. ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 05.07.2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ನೈಸ್ ರಸ್ತೆ ಕಾಮಗಾರಿ ಕುರಿತು ರಚಿಸಿದ್ದು, ಸದರಿ ಸಮಿತಿಯು ಅಧ್ಯಯನ ನಡೆಸಿ ಸರ್ಕಾರಕ್ಕೆ ನೀಡಿರುವ ನಿರ್ದೇಶನಗಳೇನು: (ಸಂಪೂರ್ಣ ಮಾಹಿತಿ ನೀಡುವುದು | ನೈಸ್ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಸೂಕ್ತ ನಿರ್ಣಯಗಳನ್ನು ಮಾಡಲು, ಸರ್ಕಾರದ ಹಂತದಲ್ಲಿ ಉನ್ನತಮಟ್ಟದ ಸಮಿತಿ, ಅಧಿಕಾರದತ್ತ ಸಮಿತಿ ಮತ್ತು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿರುತ್ತದೆ. (ಸರ್ಕಾರಕ್ಕೆ ನೀಡಲಾಗಿದ್ದ ನಿರ್ದೇಶನಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ). |
| ಆ) | ಸಾರ್ವಜನಿಕ ಮತ್ತು ರೈತರ ಜಮೀನುಗಳ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ನೈಸ್ ರಸ್ತೆ ಕಾಮಗಾರಿಗೆ ಸಂಬಂಧಿಸಿಂತೆ, ಯಾವುದೇ ಕಾಲಮಿತಿಯನ್ನು ನಿಗಧಿಪಡಿಸಿರುವುದಿಲ್ಲ ಆದರೆ, ಸದರಿ ಯೋಜನೆಗೆ ಸಂಬಂಧಿಸಿದಂತೆ FWA ಪ್ರಕಾರ 30 ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. |

**ಸಂಖ್ಯೆ: ಲೋಇ 474 ಸಿಆರ್‌ಎಂ 2023**

(ಸತೀಶ್ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

## ಅನುಬಂಧ-1

ಮೇಲಿನ ಹಿನ್ನೆಲೆ ಟಿಪ್ಪಣಿ (ಪ್ಯಾರಾ 1–9) ಮತ್ತು ಮೇಲಿನ (ಪ್ಯಾರಾಗಳು 10–16) ಗಳಲ್ಲಿ ಚರ್ಚಿಸಿರುವಂತೆ ಸಮಿತಿಯು ಈ ಕೆಳಗಿನ ಕ್ರಮಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರ್ದೇಶಿಸಿದೆ.

1. ದಿನಾಂಕ:14.10.1998 ರಂದು ಕೆಐಎಡಿಬಿ ಮತ್ತು ಯೋಜನಾ ಪ್ರವರ್ತಕರ ಮಧ್ಯೆ ಮಾಡಿಕೊಂಡಿರುವ ಒಪ್ಪಂದವನ್ನು ನಿಯಾಮಾನುಸಾರ ರದ್ದುಪಡಿಸುವುದು/ ವಜಾಮಾಡುವುದು/ಸರಿಪಡಿಸುವುದು

2. ಸ್ವಾಧೀನಮಾಡಿಕೊಳ್ಳಲಾದ FWA ಹೊರಗಿನ ಜಮೀನುಗಳನ್ನು ಇಲಾಖೆಯು ಬಿಡುಗಡೆ ಮಾಡಲು ನಿಯಾಮಾನುಸಾರ ಸರಿಯಾದ ಕ್ರಮ ತೆಗೆದುಕೊಳ್ಳುವುದು.

3. ಬಿಎಂಐಸಿಪಿಗಾಗಿ ಉಪಯೋಗಿಸಲಾದ FWA ಹೊರಗಿರುವ ಜಮೀನುಗಳನ್ನು ಮತ್ತು ಉಪಯೋಗಿಸದೇ ಇರುವ ಜಮೀನುಗಳನ್ನು ನಿಯಾಮಾನುಸಾರ ಸಮಾನವಾಗಿ ಸಮನ್ವಯಗೊಳಿಸುವುದು.

4. ಶ್ರೀ ಸೋಮಶೇಖರ್ ರೆಡ್ಡಿ ರವರ ಪ್ರಕರಣದ ಪ್ಯಾರಾ–51 ರಲ್ಲಿ ನಿಗಧಿಪಡಿಸಿದಂತೆ ಅವಶ್ಯಕವಿರುವ ಜಮೀನುಗಳನ್ನು ಬಿಟ್ಟು FWA ಹೊರಗಡೆ ಇರುವ ಸರ್ಕಾರದ ಜಮೀನುಗಳು ವಿಶೇಷವಾಗಿ ಕೆರೆಯ ಜಮೀನುಗಳು, ಸ್ಮಶಾನಗಳು, ಕಾಮಾನ್ಸ್ ಜಮೀನುಗಳು, ಮುಂತಾದವುಗಳನ್ನು ಯೋಜನಾ ಪ್ರವರ್ತಕರಿಂದ ಹಿಂಪಡೆಯಲು ನಿಯಾಮಾನುಸಾರ ಇಲಾಖೆಯು ಕ್ರಮ ಕೈಗೊಳ್ಳುವುದು.

5. ಯೋಜನೆಗೆ ಕಾರ್ಯಗತಗೊಳಿಸಲಾದ ಜಮೀನುಗಳನ್ನು ನೊಂದಣಿ ಪತ್ರವನ್ನು ನಿಯಾಮಾನುಸಾರ ರದ್ದುಗೊಳಿಸುವುದು.

6. FWA ಮತ್ತು PTR ಓದಿಕೊಂಡಂತೆ ODP ಯನ್ನು ಪರಿಷ್ಕರಿಸುವುದು ಮತ್ತು ನಿಯಾಮಾನುಸಾರ ಹದ್ದುಬಸ್ತಿನಲ್ಲಿ ತರುವುದು.

7. ಎಲ್ಲಾ ಬಾಕಿ ಇರುವ ವಿಷಯಗಳು ನಿಯಾಮಾನುಸಾರ ಚರ್ಚಿಸಿದಂತೆ ಕ್ರಮವಹಿಸುವುದು.